**ಅ.ದಾ. ಸಂಖ್ಯೆ: 80 / 2022**
**ಪಿ.ಡಬ್ಲ್ಯೂ -01 ( ನರಸಿಂಹರಾಜು )**

ದಿನಾಂಕ: **24-11-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು :- ಪ್ರತಿವಾದಿಯ** ಪರ ಶ್ರೀ. **ಎಸ್.ವಿ.** ವಕೀಲರಿಂದ :-

ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿಪಿ-1 ರ ವಂಶವೃಕ್ಷವನ್ನು ಯಾವಾಗ ತಯಾರಿಸಿರುತ್ತೀರಿ ಎಂದರೆ ಸಾಕ್ಷಿ ದಾವೆಯನ್ನು ಸಲ್ಲಿಸುವ ಮೊದಲು ಎಂದು ನುಡಿಯುತ್ತಾರೆ. ದಾವೆಯನ್ನು ಸಲ್ಲಿಸುವ ಎಷ್ಟು ದಿನ ಮೊದಲು ತಯಾರಿಸಿರುತ್ತೀರಿ ಎಂದರೆ ಸಾಕ್ಷಿ ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ. ಯಾವ ಆಸ್ತಿಗೆ ಸಂಬಂಧಿಸಿದಂತೆ ದಾವೆ ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿ ಸರ್ವೆ ನಂಬರ್-19/5 ಎಂದು ನುಡಿಯುತ್ತಾರೆ. ಸರ್ವೆ ನಂಬರ್-19/5 ಯಾವಾಗ ಪೋಡಿ ಆಗಿರುತ್ತದೆ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಬರ್-19/5 ರ ದಾಖಲೆಯನ್ನು ಯಾವಾಗಿನಿಂದ ನೋಡುತ್ತಿದ್ದೀರಿ ಎಂದರೆ ಸಾಕ್ಷಿ ಸುಮಾರು ವರ್ಷಗಳಿಂದ ಅಂದರೆ ನಾನು ವಯಸ್ಸಿಗೆ ಬಂದಾಗಿನಿಂದ ನೋಡುತ್ತಿದ್ದೇನೆಂದು ನುಡಿಯುತ್ತಾರೆ. ನೀವು ವಯಸ್ಸಿಗೆ ಬಂದಾಗ ದಾವ ಸ್ವತ್ತಿನ ದಾಖಲೆಯನ್ನು ತೆಗೆದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಬರ್-19/5 ರ ದಾಖಲೆಗಳನ್ನು ಯಾವಾಗ ಪಡೆದುಕೊಂಡಿರುತ್ತೀರಿ ಎಂದರೆ ಸಾಕ್ಷಿ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಎಂದು ನುಡಿಯುತ್ತಾರೆ. ದಾವೆಯನ್ನು ಸಲ್ಲಿಸುವ ಮೊದಲು ದಾವ ಸ್ವತ್ತಿನ ದಾಖಲೆಯನ್ನು ಪಡೆದ್ದಿರಲಿಲ್ಲವಾ ಎಂದರೆ ಸಾಕ್ಷಿ ಪಡೆದಿದ್ದೇವು ಎಂದು ನುಡಿಯುತ್ತಾರೆ. ಯಾವ ವರ್ಷದಲ್ಲಿ ಪಹಣಿ ಪಡೆದಿದ್ದೀರಿ ಎಂದರೆ ಸಾಕ್ಷಿ ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಏನು ದಾಖಲೆಗಳನ್ನು ಪಡೆದಿದ್ದರೋ ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲೆಗಳನ್ನು ಹೊರತು ಪಡಿಸಿ ನಿಮ್ಮ ಬಳಿ ದಾವ ಆಸ್ತಿಗೆ ಸಂಬಂಧಪಟ್ಟ ಇನ್ನೂ ಯಾವುದೇ ದಾಖಲೆಗಳು ಇಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

2. ದೊಡ್ಡಳ್ಳಿ ಎನ್ನುವುದು ಊರಿನ ಹೆಸರು ಯಾವುದೇ ವ್ಯಕ್ತಿಯ ಹೆಸರಲ್ಲ ಎಂದರೆ ಸಾಕ್ಷಿ ಗ್ರಾಮದ ಹೆಸರು ಎಂದು ನುಡಿಯುತ್ತಾರೆ. ನಿಮ್ಮ ತಾತ ಕದರಯ್ಯನವರಿಗೆ ಎಷ್ಟು ಜನ ಮಕ್ಕಳು ಇದ್ದರು ಎಂದು ವಂಶವೃಕ್ಷ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಒಬ್ಬನೇ ಮಗ

**ಅ.ದಾ. ಸಂಖ್ಯೆ: 80 / 2022**
**ಪಿ.ಡಬ್ಲ್ಯೂ -01 ( ನರಸಿಂಹರಾಜು )**

ಇದ್ದರು ಎಂದು ನುಡಿಯುತ್ತಾರೆ. ನಿಪಿ-1 ರ ವಂಶವೃಕ್ಷದಲ್ಲಿ ದೊಡ್ಡಳ್ಳಿ ಎಂದು ನಮೂದು ಇರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಪ್ರತಿವಾದಿಯ ಪರ ವಕೀಲರು ಮುಂದುವರಿದ ವಾಟೀ ಸವಾಲಿಗೆ ಸಮಯ ಕೋರಿದ್ದರಿಂದ ವಾಟೀ ಸವಾಲು ಮುಂದೂಡಲಾಯಿತು.**

ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,

ಪ್ರ. ನ್ಯಾ . ದಂ. ಮತ್ತು ಜೆ. ಎಂ. ಎಫ್. ಸಿ.
ಮಾಗಡಿ.